**ಇಂದು ದಿನಾಂಕ 07.02.2026 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 11 ಮತ್ತು 12 ನೇ ಪ್ರತಿವಾದಿಯರ ಪರ ವಕೀಲರಿಂದಃ**

**2.** ದಾವಾ ಆಸ್ತಿಗಳು ಮೂಲತಃ ಗೋಪಾಲಪ್ಪನಿಗೆ ಸೇರಿದ್ದು. ದಾವಾ ಆಸ್ತಿಗಳು 2 ನೇ ಪ್ರತಿವಾದಿಗೆ ಹೇಗೆ ಬಂತು ಎಂದರೆ ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ. ಆನಂತರ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಾತನ ಹೆಸರು ಮುನಿಯಪ್ಪ. ಅವರಿಗೆ ಒಟ್ಟು 5 ಜನ ಮಕ್ಕಳು. ಅವರು ಗೋಪಮ್ಮ, ವೆಂಕಟಲಕ್ಷ್ಮಮ್ಮ, ಜಯಲಕ್ಷ್ಮಮ್ಮ, ನರಸಮ್ಮ ಮತ್ತು ಗೋಪಾಲಪ್ಪ. ನನ್ನ ತಾತ ಬದುಕಿದ್ದಾಗ ಮನೆಯ ಯಜಮಾನಿಕೆಯನ್ನು 2 ನೇ ಪ್ರತಿವಾದಿ ಮಾಡುತ್ತಿದ್ದರು. 2 ನೇ ಪ್ರತಿವಾದಿಯೇ ಅವರ ಅಕ್ಕ-ತಂಗಿಯರಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರಿಗೆ ವ್ಯವಸಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ನಿಜ. 2 ನೇ ಪ್ರತಿವಾದಿ ರಾಗಿ ಬೆಳೆಯುತ್ತಿದ್ದರು. ಅವರಿಗೆ ರಾಗಿ ಬೆಳೆ ಬಿಟ್ಟು ಬೇರೆ ಆದಾಯದ ಮೂಲ ಇರಲಿಲ್ಲ. 2 ನೇ ಪ್ರತಿವಾದಿ ಅವರ ಕುಟುಂಬದ ಪೋಷಣೆಗೋಸ್ಕರ ಎಷ್ಟು ಸಾಲ ಮಾಡಿದ್ದರು ಎಲ್ಲಿ ಮಾಡಿದ್ದರು ಎಂದು ಗೊತ್ತಿಲ್ಲ. ಐಟಂ ನಂ.2 ಮತ್ತು 3 ಆಸ್ತಿಗಳನ್ನು ಬ್ಯಾಂಕಿನಲ್ಲಿ ಅಡಮಾನ ಇಟ್ಟಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ಐಟಂ ನಂ.2 ಮತ್ತು 3 ಆಸ್ತಿಗಳ ಮೇಲೆ ಗೋಪಾಲಪ್ಪನವರು 1988 ರಲ್ಲಿ ಒಂದು ಸಲ 2004 ರಲ್ಲಿ ಒಂದು ಸಲ 2013 ರಲ್ಲಿ ಒಂದು ಸಲ ವಿವಿಧ ಬ್ಯಾಂಕುಗಳಿಂದ ಆ ಜಮೀನುಗಳನ್ನು ಒತ್ತೆ ಇಟ್ಟು ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ. ನನ್ನ ತಾಯಿ ಮದುವೆ ಮತ್ತು ಅವರ ಅಕ್ಕ-ತಂಗಿಯ ಮದುವೆ ಮತ್ತು ಕುಟುಂಬ ಪೋಷಣೆಗೆ 2 ನೇ ಪ್ರತಿವಾದಿ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲ. ನನ್ನ ತಾಯಿಗೆ 1957-58 ರಲ್ಲಿ ಮದುವೆಯಾಗಿತ್ತು. ಗೋಪಮ್ಮ ಮತ್ತು ಜಯಮ್ಮನ ಮದುವೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ನನ್ನ ತಾಯಿ ಮದುವೆಯಾದ ನಂತರ ನಾನು ಈಗ ಎಲ್ಲಿ ವಾಸ ಮಾಡುತ್ತಿದ್ದೇನೋ ಅಲ್ಲೇ ವಾಸ ಮಾಡುತ್ತಿದ್ದರು ಎಂದರೆ ತವರು ಮನೆಯಲ್ಲಿ 10 ವರ್ಷ ಇದ್ದರು ಆನಂತರ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು. ಐಟಂ ನಂ.2 ಮತ್ತು 3 ನ್ನು 2 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎಂದು ನನಗೆ ಮೊದಲನೇ ಬಾರಿಗೆ 2019 ರಲ್ಲಿ ತಿಳಿಯಿತು. ಆ ಕ್ರಯಪತ್ರದ ನಕಲನ್ನು ಮೊದಲನೇ ಬಾರಿಗೆ ನಾನು 2019 ರಲ್ಲಿ ತೆಗೆಸಿದ್ದೇನೆ. ಆ ಕ್ರಯಪತ್ರದಲ್ಲಿ ಏನೇನು ಬರೆದಿದೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿ ಸಾಲಕೋಸ್ಕರ ಮತ್ತು ಕುಟುಂಬ ಪೋಷಣೆಗೆ ಮಾರಾಟ ಮಾಡಿದ್ದಾರೆ ಎಂದು ಕ್ರಯಪತ್ರದಲ್ಲಿ ಒಕ್ಕಣೆ ಇದೆ ಎಂಬ

ವಿಚಾರ ನನಗೆ ಗೊತ್ತಿಲ್ಲ. ನನ್ನ ತಾಯಿ ಮೊದಲನೇ ಬಾರಿ ಭಾಗ ಕೊಡಿ ಎಂದು ಯಾವಾಗ ಕೇಳಿದರು ಎಂದರೆ 2015 ರಿಂದ ಕೇಳಿಕೊಂಡು ಬರುತ್ತಿದ್ದರು. ನಮಗೆ ಗೊತ್ತಿಲ್ಲದೆ 2017 ರಲ್ಲಿ ಮಾರಾಟ ಮಾಡಿದ್ದಾರೆ. ಸರ್ವೆ ನಂ.99 ಮತ್ತು 100, 2016-17 ರಲ್ಲಿ ಎಷ್ಟು ಬೆಲೆ ಬಾಳುತ್ತಿತ್ತು ಎಂದು ಗೊತ್ತಿಲ್ಲ. ಐಟಂ ನಂ.1 ಆಸ್ತಿ 2016-17 ರಲ್ಲಿ ಎಷ್ಟು ಬೆಲೆ ಬಾಳುತ್ತಿತ್ತು ಎಂದು ಗೊತ್ತಿಲ್ಲ. ಐಟಂ ನಂ.2 ಮತ್ತು 3 ನ್ನು ಕುಟುಂಬಕೋಸ್ಕರ ಮಾರಾಟ ಮಾಡಿರುವ ಕಾರಣ ಬೇರೆ ಆಸ್ತಿಗಳಲ್ಲಿ ನಾವು ಭಾಗ ಕೇಳಬೇಕು ಮಾರಾಟ ಮಾಡಿರುವ ಆಸ್ತಿಗಳಲ್ಲಿ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದಾಗಲೇ ನಮ್ಮ ಗಮನಕ್ಕೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**